**ದಿನಾಂಕಃ 21.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ವಿ.ಎಸ್.ಆರ್. ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ತಂದೆ, ಅವರು 3 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನಮ್ಮ ಕುಟುಂಬದ ಮೂಲ ಪುರುಷ ಕದುರಪ್ಪ ಎಂದರೆ ಸರಿ. ಸದರಿ ಕದುರಪ್ಪನಿಗೆ ಇಬ್ಬರು ಹೆಂಡತಿಯರಾದ 1 ನೇ ರಂಗಮ್ಮ ಮತ್ತು 2 ನೇ ಅಟ್ಟಿ ತಿಮ್ಮಕ್ಕ ಎಂದರೆ ಸರಿಯಲ್ಲ. ಸದರಿ ರಂಗಮ್ಮನಿಗೆ ಇಬ್ಬರು ಮಕ್ಕಳಲ್ಲಿ 1 ನೇ ಸ್ವಾಡಿಗೆ ಈರಣ್ಣ ಮತ್ತು 2 ನೇ ಬರುಡೇ ಈರಣ್ಣ ಆಗಿರುತ್ತಾರೆ. ಸದರಿ ಬರುಡೆ ಈರಣ್ಣನಿಗೆ 4 ಜನ ಮಕ್ಕಳು, 1 ನೇ ಈರಮರಿಯಣ್ಣ, 2 ನೇ ಕದುರಪ್ಪ, 3 ನೇ ದಾಸಪ್ಪ ಮತ್ತು 4 ನೇ ಬುಡ್ಡಮರಿಯಪ್ಪ ಎಂದರೆ ಇರಬಹುದು. 2 ನೇ ಕದುರಪ್ಪನ ಹೆಂಡತಿ ತಿಮ್ಮಕ್ಕ ಎಂದರೆ ಸರಿ. ಸ್ವಾಡಿಗೆ ಈರಣ್ಣನಿಗೆ ಇರುವ ಇಬ್ಬರು ಹೆಂಡತಿಯರ ಬಗ್ಗೆ ಗೊತ್ತಿಲ್ಲ. 1 ನೇ ಹೆಂಡತಿ ನಿಂಗಮ್ಮನಿಗೆ ಈರಣ್ಣ ಮತ್ತು ಕದುರಪ್ಪ ಎಂಬ ಇಬ್ಬರು ಮಕ್ಕಳು ಇರುವ ಬಗ್ಗೆ ಗೊತ್ತಿಲ್ಲ. ಈರಣ್ಣನ ಹೆಂಡತಿ ಕೆಂಚಮ್ಮ ರವರಿಗೆ 3 ಜನ ಮಕ್ಕಳು, 1 ನೇ ಈರಣ್ಣ, 2 ನೇ ನಿಂಗಣ್ಣ ಮತ್ತು 3 ನೇ ದಾಸಪ್ಪ ಎಂದರೆ ಸರಿ. ಸದರಿ ದಾಸಪ್ಪನನ್ನು ನನ್ನ ಪರವಾಗಿ ಡಿಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಕ್ರಯಪತ್ರ ನನ್ನ ತಾತ ಕದುರಪ್ಪನ ಹೆಸರಿನಲ್ಲಿರುತ್ತದೆ. ನಿಡಿ.9 ರಲ್ಲಿರುವ ಕದುರಪ್ಪ ನನ್ನ ತಾತ. ನಿಡಿ.9 ರಲ್ಲಿರುವ ಕದುರಪ್ಪ ಬುರುಡೆ ಈರಣ್ಣನ ಮಗ ಎಂದರೆ ಸರಿ. ನಿಡಿ.9 ರಲ್ಲಿರುವ ಬುಡ್ಡ ಮರಿಯಪ್ಪ ನನ್ನ ತಾತನ ತಮ್ಮ ಎಂದರೆ ಇರಬಹುದು. ನಿಡಿ.9 ರ ಕ್ರಯಪತ್ರದಂತೆ ದಾವಾ ಸ.ನಂ.97 ರ 1 ಎಕರೆ 4 ಗುಂಟೆ ಇರುತ್ತದೆ, ಸಾಕ್ಷಿ ಮುಂದುವರೆದು ನಂತರ ಪೋಡಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಚೆಕ್ಕುಬಂದಿ ಪೂ-ದಾಸಪ್ಪ, ಪ-ಈರಮರಿಯಣ್ಣ, ಉ-ಗೌಡಮದ್ದಣ್ಣ ಮತ್ತು ದ-ಮರಿಯಣ್ಣ ಇರುತ್ತದೆ.

2. ದಾವಾ ಸ.ನಂ.97/6 ರ 1 ಎಕರೆ 37 ಗುಂಟೆಗೆ ವಾದಿ ದಾವೆ ಹಾಕಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಷೆಡ್ಯೂಲ್ ನಂತೆ ಇರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆ ಮತ್ತು ನಿಡಿ.9 ರ ಚೆಕ್ಕುಬಂದಿ ಬೇರೆ

ಎಂದರೆ ಸರಿ, ಸಾಕ್ಷಿ ಮುಂದುವರೆದು ನಿಡಿ.9 ರ ಕ್ರಯಪತ್ರದ ಚೆಕ್ಕುಬಂದಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಗಳ ಮೂಲ ಪುರುಷ ಕದುರಪ್ಪ ಉರುಫ್ ಮೀಸೆ ಕದುರಪ್ಪನ ಹೆಂಡತಿ ಬೊರಮ್ಮನಿಗೆ ಈರಪ್ಪ ಎಂಬ ಮಗ ಎಂದರೆ ಗೊತ್ತಿಲ್ಲ. ಈರಪ್ಪನಿಗೆ ದ್ಯಾವರಪ್ಪ ಮತ್ತು ವಾದಿ ಕದುರಪ್ಪ ಮಕ್ಕಳು ಎಂದರೆ ಸರಿಯಲ್ಲ. ದಾವಾ ಸ್ವತ್ತು 1950 ರಲ್ಲಿ ವಾದಿಗಳ ತಾತ ಮೀಸೆ ಕದುರಪ್ಪನಿಗೆ ಪಡ ಆಗಿ ಪುನಃ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಮೀಸೆ ಕದುರಪ್ಪ ಮೃತರಾದ ನಂತರ ವಾದಿಯ ತಂದೆ ಈರಪ್ಪ ಉರುಫ್ ಈರಣ್ಣರವರಿಗೆ ದಾವಾ ಸ್ವತ್ತು ಪೌತಿಖಾತೆಯಾಗಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಈರಪ್ಪರವರಿಗೆ 2 ಎಕರೆ 39 ಗುಂಟೆ ಮಾತ್ರ ಪೌತಿಖಾತೆಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ದುರಸ್ತಿಯಾಗಿ ಪೋಡಿ ಮೂಲಕ 1 ಎಕರೆ 37 ಗುಂಟೆ ವಾದಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಯ ತಂದೆ ಮೃತರಾದ ನಂತರ ವಾದಿಗೆ ದಾವಾ ಸ್ವತ್ತು ಪೌತಿಖಾತೆಯಾಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಡಿ.9 ರ ಮಾರಾಟಗಾರರಿಗೆ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.